ಕರ್ನಾಟಕ ಸರ್ಕಾರ

ಸಂಖ್ಯೆ: ಎನ್ಆರ್ಎಸ್(3)27/2014-15

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ನಿರ್ದೇಶನಾಲಯ, ಆನಂದರಾವ್ ವೃತ್ತ,
ಬೆಂಗಳೂರು-09. ದಿನಾಂಕ:18.05.2016

## ಅಧಿಕೃತ ಜ್ಞಾಪನಾ ಪತ್ರ

ವಿಷಯ:- ಶುಶ್ರೂಷಕರ ತರಬೇತಿ ಹೊಂದಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರುಗಳಿಗೆ ಶುಶ್ರೂಷಕ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ:- 1)ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯದ ಅ.ಜ್ಞಾ. ಪತ್ರ ಸಂಖ್ಯೆ: ಎನ್ಆರ್ಎಸ್(3)27/2014-15, ದಿನಾಂಕ:01.03.2016ರ ಅಂತಿಮ ಜೇಷ್ಠತಾ ಪಟ್ಟಿ.

2) ಆರೋಗ್ಯ ಮತ್ತು ಕು.ಕ.ಸೇವೆಗಳ ನಿರ್ದೇಶನಾಲಯದ ಸುತ್ತೋಲೆ ಸಂ: ಎನ್ಆರ್ಎಸ್(3)27/2014-15 ದಿನಾಂಕ:02.04.2016.

3) ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ವೈದ್ಯರು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 ಹಾಗೂ ತಿದ್ದುಪಡಿ ಆದೇಶ 2013.

4) ಸರ್ಕಾರದ ಆದೇಶ ಸಂ: ಆಕುಕ 52 ಹೆಚ್‌ಪಿಸಿ 2014, ಬೆಂಗಳೂರು, ದಿನಾಂಕ: 03.06.2014.

*****

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸೇರಿದ ಶುಶ್ರೂಷ ತರಬೇತಿ ಹೊಂದಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರುಗಳಿಗೆ ಉಲ್ಲೇಖ (1) ರಲ್ಲಿನ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪ್ರಕಟಿಸಿರುವ ಜೇಷ್ಠತಾ ಪಟ್ಟಿಯನ್ನು ಆಧರಿಸಿ, ಉಲ್ಲೇಖ(4)ರನುಸಾರ ಹೈದ್ರಾಬಾದ್-ಕರ್ನಾಟಕ 371ಜೆ ಮೀಸಲಾತಿಯನುಸಾರ ಯಾವುದೇ ನೌಕರರು ಅರ್ಹರಿರುವುದಿಲ್ಲ ಮತ್ತು ಹೈದ್ರಾಬಾದ್ ಕರ್ನಾಟಕ ಹೊರತುಪಡಿಸಿ ಅನುಬಂಧ-1 ರಲ್ಲಿ ವೇತನ ಶ್ರೇಣಿ ರೂ. 17650-450-19000-500-21000-600-24600-700-28800-800-32000ರಲ್ಲಿ ಶುಶ್ರೂಷಕರ ಹುದ್ದೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಸ್ಥಾನಪನ್ನ ಪದೋನ್ನತಿ ನೀಡಲಾಗಿದೆ.

1. ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿರುವ ನೌಕರರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಮತ್ತು ಜೇಷ್ಠತೆಯಲ್ಲಿ ಕಿರಿಯರಾಗಿರುವುದು ಕಂಡುಬಂದಲ್ಲಿ ಅಂತಹ ನೌಕರರ ಪದೋನ್ನತಿಯನ್ನು ಯಾವುದೇ ಮುನ್ಸೂಚನೆ ಅಥವಾ ಕಾರಣ ತಿಳಿಸದೇ ಹಿಂಪಡೆಯುವ ಅಧಿಕಾರಕ್ಕೊಳಪಟ್ಟಿರುತ್ತದೆ ಹಾಗೂ ಸಂಬಂಧಿಸಿದ ನೌಕರರ ಕಾರ್ಯ ನಿರ್ವಹಣಾ ವರದಿಗೆ ಸಹಿ ಮಾಡಿದ ಅಧಿಕಾರಿ/ಕಛೇರಿ ಮುಖ್ಯಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.
2. ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಸ್ಥಾನಪನ್ನ ಪದೋನ್ನತಿ ನೀಡಿರುವ ನೌಕರರು ಒಂದು ವೇಳೆ ಈಗಾಗಲೇ ಮರಣ ಹೊಂದಿದ್ದಲ್ಲಿ/ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿದ್ದಲ್ಲಿ ಹಾಗೂ ಈಗಾಗಲೇ ಪದೋನ್ನತಿ ಹೊಂದಿ ಕಣ್ತಪ್ಪಿನಿಂದ ಈ ಪಟ್ಟಿಯಲ್ಲಿ ಸೇರ್ಪಡೆಗೊಂಡಿದ್ದಲ್ಲಿ ಅಂತಹ ನೌಕರರು ಈ ಸ್ಥಾನಪನ್ನ ಪದೋನ್ನತಿ ಪಡೆಯಲು ಅರ್ಹರಿರುವುದಿಲ್ಲ.
3. ಸುಳ್ಳು ಮಾಹಿತಿ/ ನಕಲಿ ಜಾತಿ ಪ್ರಮಾಣ ಪತ್ರ ನೀಡಿ ಪದೋನ್ನತಿ ಪಡೆದಿರುವುದು ಕಂಡು ಬಂದಲ್ಲಿ ಅಂತಹವರ ಪದೋನ್ನತಿಯನ್ನು ರದ್ದುಪಡಿಸಲಾಗುವುದು ಹಾಗೂ ಅಂತಹ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
4. ಈಗಾಗಲೇ ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರಾಗಿ ಪದೋನ್ನತಿ ಹೊಂದಿದ್ದಲ್ಲಿ ಅಂತಹ ನೌಕರರುಗಳು ಈ ಪದೋನ್ನತಿಗೆ ಅರ್ಹರಿರುವುದಿಲ್ಲ.

ಪದೋನ್ನತಿ ಹೊಂದಿರುವ ನೌಕರರುಗಳನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆ ಮಾಡಿ ನೇಮಕ ಮಾಡಿದ ಸ್ಥಳದಲ್ಲಿ ಕರ್ತವ್ಯದ ಮೇಲೆ ಹಾಜರಾಗುವಂತೆ ಸಂಬಂಧಪಟ್ಟ ನೌಕರರುಗಳಿಗೆ ಸೂಚಿಸುವಂತೆ ಮೇಲಾಧಿಕಾರಿಗಳಿಗೆ ಆದೇಶಿಸಿದೆ. ಪಟ್ಟಿಯಲ್ಲಿರುವ ನೌಕರರು ಈಗ ನಿಮ್ಮ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸದೇ ಇದ್ದಲ್ಲಿ ಅವರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಗೆ ಮಾಹಿತಿಯನ್ನು ಕಳುಹಿಸಿ ಕೊಡಲು ಕೋರಲಾಗಿದೆ.

ಪದೋನ್ನತಿ ನೀಡಿ ನೇಮಕ ಮಾಡಿರುವ ನೌಕರರು ಈ ಆದೇಶ ಹೊರಡಿಸಿದ 07 ದಿನದೊಳಗಾಗಿ ನೇಮಕಾತಿ ಮಾಡಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಹಾಜರಾತಿ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ. ತಪ್ಪಿದಲ್ಲಿ ಅಂತಹವರ ಪದೋನ್ನತಿ ಆದೇಶವನ್ನು ಯಾವುದೇ ಮುನ್ಸೂಚನೆ ನೀಡದೆ ಹಿಂಪಡೆಯಲಾಗುವುದೆಂದು ಹಾಗೂ ಕರ್ತವ್ಯದಿಂದ ಬಿಡುಗಡೆಗೊಳ್ಳದೆ ವಿಳಂಬವಾಗಿ ಬಿಡುಗಡೆಗೊಂಡು ವರದಿ ಮಾಡಿಕೊಳ್ಳುವ ನೌಕರರ ಜೇಷ್ಠತೆಯನ್ನು ಜೇಷ್ಠತಾ ನಿಯಮಗಳನ್ವಯ ನಿಗದಿಪಡಿಸಲಾಗುವುದೆಂದು ತಿಳಿಸಲಾಗಿದೆ.

| ಕ್ರ. ಸಂ. | ಜೇ. ಸಂ. | ಹೆಸರು ಮತ್ತು ಕಾರ್ಯನಿರತ ಸ್ಥಳ | ಕೌನ್ಸೆಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡಿರುವ ಸ್ಥಳ |
|---|---|---|---|
| 1 | 1 | ಎಂ.ಕೆ. ಶಾಂತಿ,<br>ಚೆಲುವಾಂಬ ಆಸ್ಪತ್ರೆ, ಮೈಸೂರು | ಸಮುದಾಯ ಆರೋಗ್ಯ ಕೇಂದ್ರ, ಸಿದ್ದಾಪುರ, ಕೊಡಗು ಜಿಲ್ಲೆ |
| 2 | 4 | ಸುಕುಮಾರಿ,<br>ಪ್ರಾಥಮಿಕ ಆರೋಗ್ಯ ಕೇಂದ್ರ, ಕಳಾಸಪುರ, ಚಿಕ್ಕಮಗಳೂರು ಜಿಲ್ಲೆ | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೇಂದ್ರ, ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು |
| 3 | 5 | ಎಲ್. ಚಂದ್ರಮ್ಮ,<br>ಸಂಯುಕ್ತ ಆಸ್ಪತ್ರೆ, ನಗರ, ಹೊಸನಗರ ತಾ: ಶಿವಮೊಗ್ಗ ಜಿಲ್ಲೆ | ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ, ದಾವಣಗೆರೆ |
| 4 | 6 | ಎನ್. ಶಶಿಕಲಾ,<br>ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡಚಿನ್ನಹಳ್ಳಿ, ಬಂಗಾರಪೇಟೆ ತಾ: ಕೋಲಾರ ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಬಂಗಾರಪೇಟೆ, ಕೋಲಾರ ಜಿಲ್ಲೆ |
| 5 | 7 | ಎಸ್. ಲಲಿತ,<br>ಪ್ರಾಥಮಿಕ ಆರೋಗ್ಯ ಕೇಂದ್ರ, ಗಾವಡಗೆರೆ, ಹುಣಸೂರು ತಾ: ಮೈಸೂರು ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಹುಣಸೂರು, ಮೈಸೂರು ಜಿಲ್ಲೆ |
| 6 | 8 | ಮೀನಾಕ್ಷಿ ಚಂದ್ರಕಾಂತ ನಾಯಕ,<br>ಸಮುದಾಯ ಆರೋಗ್ಯ ಕೇಂದ್ರ, ಹಿರೇಬಾಗೇವಾಡಿ, ಬೆಳಗಾವಿ ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಖಾನಾಪುರ, ಬೆಳಗಾವಿ ಜಿಲ್ಲೆ |
| 7 | 9 | ಅನುಪಮಾ ಹೆಚ್. ಚಲವಾದಿ,<br>ಪ್ರಾಥಮಿಕ ಆರೋಗ್ಯ ಕೇಂದ್ರ, ನಾಗಠಾಣ, ವಿಜಯಪುರ ತಾ: ಜಿಲ್ಲೆ | ಜಿಲ್ಲಾ ಆಸ್ಪತ್ರೆ, ವಿಜಯಪುರ |
| 8 | 10 | ಅನಿತಾ ಎಂ.<br>ಪ್ರಾಥಮಿಕ ಆರೋಗ್ಯ ಕೇಂದ್ರ ಕಲಾದಗಿ, ಬಾಗಲಕೋಟೆ ತಾ: ಜಿಲ್ಲೆ | ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ |
| 9 | 11 | ಶೈಲಜ ಹೆಚ್.ಡಿ.<br>ಪ್ರಾಥಮಿಕ ಆರೋಗ್ಯ ಕೇಂದ್ರ, ಸಾಲಗಾಮೆ, ಹಾಸನ ಜಿಲ್ಲೆ | ಸಮುದಾಯ ಆರೋಗ್ಯ ಕೇಂದ್ರ, ಮೊಸಳೆ ಹೊಸಳ್ಳಿ, ಹಾಸನ ತಾ: ಜಿಲ್ಲೆ |
| 10 | 12 | ಭಾನುಮತಿ ಎಸ್.ಸಿ.<br>ಸಮುದಾಯ ಆರೋಗ್ಯ ಕೇಂದ್ರ, ಬೇಗೂರು, ಚಾಮರಾಜನಗರ ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ, ಕೊಡಗು ಜಿಲ್ಲೆ. |
| 11 | 13 | ನಾಗರತ್ನ ಬಿ. ಪಾಟೀಲ,<br>ಸಮುದಾಯ ಆರೋಗ್ಯ ಕೇಂದ್ರ, ಯರಗಟ್ಟಿ, ಬೆಳಗಾವಿ ಜಿಲ್ಲೆ | ಸಾರ್ವಜನಿಕ ಆಸ್ಪತ್ರೆ, ಬೈಲಹೊಂಗಲ, ಬೆಳಗಾವಿ ಜಿಲ್ಲೆ |
| 12 | 14 | ಎಸ್.ಎಸ್. ಅಕ್ಕತಂಗೇರಾಳ,<br>ಪ್ರಾಥಮಿಕ ಆರೋಗ್ಯ ಕೇಂದ್ರ, ಬುಗಟೆ ಆಲೂರ, ಹುಕ್ಕೇರಿ ತಾ: ಚಿಕ್ಕೋಡಿ ಅಪರ ಜಿಲ್ಲೆ | ಸಮುದಾಯ ಆರೋಗ್ಯ ಕೇಂದ್ರ, ಸಂಕೇಶ್ವರ, ಹುಕ್ಕೇರಿ ತಾ: ಚಿಕ್ಕೋಡಿ ಅಪರ ಜಿಲ್ಲೆ |

ಕೌನ್ಸೆಲಿಂಗ್ ಮೂಲಕ ನೇಮಕ ಮಾಡಿದ ಸ್ಥಳಕ್ಕೆ ನೇರವಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಿದೆ.

ಕಛೇರಿ ಟಿಪ್ಪಣಿ ಮಾನ್ಯ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿದೆ

ಮುಖ್ಯ ಆಡಳಿತಾಧಿಕಾರಿಗಳು-2
ಆರೋಗ್ಯ ಮತ್ತು ಕು.ಕ. ಸೇವೆಗಳು.

ಪ್ರತಿಯನ್ನು ಈ ಕೆಳಕಂಡವರ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ:-

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು-----------------------------------------
2. ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ---------------------------------------------------------
3. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ/ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರ ----------------------------------------------------------------------------------
4. ಹೈದ್ರಾಬಾದ್-ಕರ್ನಾಟಕ ಹೊರತುಪಡಿಸಿದ ಕ್ರ.ಸಂ.01 ರಿಂದ 12 ರವರೆಗಿನ ನೌಕರರ ಮಾಹಿತಿಗಾಗಿ.
5. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕ ಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
6. ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಈ ಅಧಿಕೃತ ಜ್ಞಾಪನಾ ಪತ್ರದಲ್ಲಿ ಶುಶ್ರೂಷ ತರಬೇತಿ ಹೊಂದಿರುವ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರುಗಳಿಗೆ ಸ್ಥಾನಪನ್ನ ಪದೋನ್ನತಿ ನೀಡಲಾದವರುಗಳ ಎರಡು ವರ್ಷದ ಡಿಪ್ಲೋಮೋ ಇನ್ ನರ್ಸಿಂಗ್ ತರಬೇತಿ ಹೊಂದಿರುವವರು ಪದೋನ್ನತಿಗೆ ಅರ್ಹರಿರುವುದರಿಂದ ಮೂಲ ತರಬೇತಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಪರಿಶೀಲಿಸಿ ಕೆ.ಸಿ.ಎಸ್.ಆರ್. ನಿಯಮ 42 (ಬಿ) ಪ್ರಕಾರ ವೇತನ ಬಡ್ತಿ ನಿಗದಿಪಡಿಸಲು ಕ್ರಮ ಜರುಗಿಸುವುದು.
7. ಆದೇಶ ಪ್ರತಿ/ಕಛೇರಿ ಪ್ರತಿ.